ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ಹುಲಿ ಹಸಿವೆ ಆದಾಗ ಮಾಂಸದ ಬದಲು ಹುಲ್ಲನ್ನು ತಿಂದರೆ?



ಜಿಂಕೆಗಳು ಹುಲಿಯ ಫೇಸ್‌ಬುಕ್‌ಗೆ ಫ್ರೆಂಡ್ ರಿಕ್ವೆಸ್ಟ್ ಕಳುಹಿಸುತ್ತವೆ.

ಬೂಕನಕೆರೆ ವಿಜೇಂದ್ರ, ಮೈಸೂರು
ರಾಜಕಾರಣಿಗಳನ್ನೇಕೆ ತಲೆ ಇಲ್ಲದವರು ಎನ್ನುತ್ತಾರೆ?
ಕಬಂಧನಂತೆ ಸಿಕ್ಕಿದ್ದನ್ನೆಲ್ಲ ಸೆಳೆಯಲು ಬಾಹು, ತುಂಬಲೊಂದು ಹೊಟ್ಟೆ ಮಾತ್ರ ಕಾಣುವುದರಿಂದ.

ಸೇತುರಾವ್ ಕುಲಕರ್ಣಿ, ಊರಿಲ್ಲ
ನಿಮಗೆ ಇಮೇಲ್‌ನಲ್ಲಿ ಪ್ರಶ್ನೆಗಳು ಬರುತ್ತಿರುವ ಈ ಸಂದರ್ಭದಲ್ಲಿ ನಿಮ್ಮ ಕಸದ ಬುಟ್ಟಿ ಏನಾಯಿತು?
ಕಂಪ್ಯೂಟರ್‌ಜೀಯ ಅಂಗಳದಲ್ಲಿ ರಿಸೈಕಲ್ ಬಿನ್, ಗೂಗಲ್‌ನಲ್ಲಿ ಟ್ರ್ಯಾಷ್ ಆಗಿ ಬದಲಾಯಿತು.

ಆರ್. ಮಧುಸೂದನ್, ಹಾಸನ
ಹೆಂಗಸರು ವಾಷಿಂಗ್ ಮೆಷೀನನ್ನು ಪ್ರೀತಿಸುವಷ್ಟು ಗಂಡನನ್ನು ಪ್ರೀತಿಸುವುದಿಲ್ಲವಂತೆ?



ಸರಿಯೇ. ಅದನ್ನು ಐದಾರು ವರ್ಷಕ್ಕೊಮ್ಮೆ ಬದಲಾಯಿಸಬಹುದಲ್ಲ!

ಕೃಷ್ಣ ಕೊಡಂಚ, ಬೆಂಗಳೂರು
ವಸ್ತುನಿಷ್ಠ ಮತ್ತು ವ್ಯಕ್ತಿನಿಷ್ಠ ನಡುವಿನ ವ್ಯತ್ಯಾಸ?
ನಡುವಿನದೇ ವ್ಯತ್ಯಾಸ–ವಸ್ತುನಿಷ್ಠವಾದಾಗ ನಡು ನೇರವಾಗಿರುತ್ತದೆ; ವ್ಯಕ್ತಿನಿಷ್ಠವಾದಾಗ ಬಾಗಿರುತ್ತದೆ.

ಪಿ.ಜೆ. ರಾಘವೇಂದ್ರ, ಮೈಸೂರು
ಕಲಿಯುಗದಲ್ಲಿ ಏಕಲವ್ಯರ ಬದಲಾಗಿ ಅನೇಕಲವ್ಯರೇ ಹೆಚ್ಚಾಗಿರಲು ಕಾರಣವೇನು ರಾಂಸ್?
ಅವನಿಗೆ ಕಾಡಿನ ಪ್ರೀತಿ ಒಂದೇ ಇತ್ತು; ಇವರಿಗೆ ಕಾಡುವ ಪ್ರೀತಿಗಳು ಅನೇಕ.

ಆರ್. ಮಧುಸೂದನ್, ಹಾಸನ
ಬರುವಾಗ ಹೆಜ್ಜೆಯ ಮೇಲೆ ಹೆಜ್ಜೆ ಇಟ್ಟು ನಿಧಾನವಾಗಿ ಬರುವ ಲಕ್ಷ್ಮೀ ಹೋಗುವಾಗ ಓಡಿಹೋಗುವುದೇಕೆ?
ಬರುವಾಗ ತೆರಿಗೆಯ ಗೋಡೆಗಳನ್ನು ದಾಟಿ ಬರಬೇಕು. ಹೋಗುವಾಗ ಹಾಗೇನಿಲ್ಲವಲ್ಲ.

ಸುಮನಾ, ತೆಲಂಗಾಣ
ಹೊಟ್ಟೆ ಹಸಿದಾಗ ಚುರ್ರೆನ್ನುವಂತೆ ತುಂಬಿದಾಗಲೂ ಸಾಕೂ ಎಂದರಚಿದ್ದರೆ ಬೊಜ್ಜು ಇತ್ಯಾದಿ ರೋಗಗಳೇ ಇರುತ್ತಿರಲಿಲ್ಲವಲ್ಲವೇ?
ತೇಗು ಬರುತ್ತದಲ್ಲ! ಬರ್ಪ್ ಮಾಡಿಯೂ ಬರ್ಫಿ ಕತ್ತರಿಸುವ ಚಾಳಿ ನಮ್ಮದು.

ಅನಸೂಯ ಟಿ, ಕೇದಿಗೆಮನೆ
ಬೀಜಮಂತ್ರಗಳು ಮೊಳಕೆ ಒಡೆಯುತ್ತವೆಯೆ?
ಹೂಂ. ಮೊಳಕೆಯೊಡೆದು ಮನದಂಗಳದಲ್ಲಿ ಪರಮಾರ್ಥದ ಮರವೇ ಬೆಳೆಯುತ್ತದೆ.

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು
ಅತ್ಯಂತ ಹೆಚ್ಚು ಬೆಲೆ ಬಾಳುವ ದುಡಿಮೆ ಯಾವುದು?
ಅಡುಗೆ ಮಾಡುವುದು. ಆಹಾರವಿಲ್ಲದೆ ಅತ್ಯಂತ ಬೆಲೆಬಾಳುವ ಪ್ರಾಣವೇ ಇರದು.

ವಿ. ಹಮೀದ್, ವಿಟ್ಲ
ಪ್ರೇಯಸಿಯ ಹೃದಯಬಡಿತಕ್ಕೂ, ಪತ್ನಿಯ ಹೃದಯಬಡಿತಕ್ಕೂ ಇರುವ ವ್ಯತ್ಯಾಸವೇನು?
ಪ್ರೇಯಸಿಯದು ಅನಿಶ್ಚಿತತೆಯ ಸೈರನ್ ಸದ್ದು; ಪತ್ನಿಯದು ನಿಶ್ಚಿತವಾದ ತಮಟೆ ಸದ್ದು.

ಎನ್.ವಿ. ಶ್ರೀನಿವಾಸ್, ಮೈಸೂರು
ಮೀಸೆ ಮಾವನಿಗೆ ಬಾಜಿ ಕಟ್ಟಲೆಂದು ಬಂದರೆ ಮಾವನಿಗೆ ಮೀಸೆಯೇ ಇರಲಿಲ್ಲವಲ್ಲಾ?
ಮನೆಯ ಯಜಮಾನರಿಗೆ ಮೀಸೆ ಇದ್ದರೆ ಸಾಕು ಅತ್ತೆಗೆ ಇದೆಯಂತೆ.

ಶೃತಿ ರಿಗ್ರೆಟ್ ಐಯ್ಯರ್, ಬೆಂಗಳೂರು
ಯಮಪಾಶ ಎಂದರೇನು?
ಇಂಷೂರೆನ್ಸನ್ನು ಬಹಳವೇ ಮೀರಿ ಬರುವ ಫೈನಲ್ ಮೆಡಿಕಲ್ ಬಿಲ್.

## ಬಹುಮಾನಿತ ಪ್ರಶ್ನೆ

ಸುಲೋಚನ ಜೆ. ರಾವ್, ಬೆಂಗಳೂರು
ಅಡಕೆಗೆ ಹೋದ ಮಾನ ಆನೆ ಕೊಟ್ಟರೂ ಬರಲ್ಲವಂತೆ. ಮಾನ ಹೋದದ್ದು ಅಡಕೆಗೋ, ಮಾನವನಿಗೋ?
ಕೊಡುವುದು ಆನೆಯೋ ಮಾನವನೋ ಎನ್ನುವುದರ ಮೇಲೆ ಉತ್ತರ ನಿರ್ಧಾರವಾಗುವುದಂತೆ.

ವಿಜಯಕುಮಾರ್ ಎಚ್.ಕೆ. ರಾಯಚೂರು
ಮಾನ ಕಳೆದುಕೊಂಡರೂ ಸಂಪತ್ತು, ಅಧಿಕಾರ ವೃದ್ಧಿಸಬೇಕೆಂಬ ಮನಸ್ಥಿತಿ ಇದೆಯಲ್ಲಾ...?
ಮರ್ಸಿಡಿಸ್‌ಗೆ ಸಿಗುವ ಮಾನ ಮಾರುತಿಗೆ ಇಲ್ಲವೆಂದು ಸಾಬೀತಾಗಿದೆಯಲ್ಲ.

ಎಸ್.ಸಿ. ರಮೇಶ್, ಮೈಸೂರು
ಬಿಗ್‌ಬಾಸ್‌ಗೆ ನಿಮ್ಮಂತಹ ಯುವಕರು, ನನ್ನಂತಹ ವಯಸ್ಕರು ಹೋದರೆ ಸಮಾಜಕ್ಕೆ ಏನು ಸಂದೇಶ ಕೊಡಬಹುದು?
ಝೂನಲ್ಲಿ ಇರುವುದಕ್ಕಿಂತ ಹೊರಗೆ ಝೂಂ ಅಂತಿರೋದೇ ಮೇಲು ಎಂದು.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ಕಣ್ಣು ಎರಡಾದರೂ ನೋಟ ಒಂದೇ. ನಾಲಿಗೆ ಒಂದೇ ಮಾತಿನ ವರಸೆ ಹಲವೇಕೆ?



ನಾಲಿಗೆಯ ಒಂದು ತುದಿ ಸಡಿಲವಾಗಿದೆಯಲ್ಲ; ಲೂಸ್‌ಗೆ ಲಗಾಮಿರುವುದಿಲ್ಲ.

ಖಾದ್ರಿ ಪ್ರಮೀಳ, ಮೇಲುಕೋಟೆ
ಬ್ಯಾಂಗಲೂರ್ ಈಗ ಬಾಂಗ್ಲಾ ಊರ್ ಆಗಿದೆಯಂತೆ?
ಗೃಹಸಚಿವಾಲಯ ಬಂಗಲ್ (ಅಡ್ಡಾದಿಡ್ಡಿ) ಮಾಡುತ್ತಿರುವುದೇ ಅದಕ್ಕೆ ಕಾರಣವಂತೆ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಲವ್ ಫೇಲ್ಯೂರ್ ಆದರೂ ಲೈಫ್ ಫೇಲ್ಯೂರ್ ಆಗಬಾರದು ಅಲ್ವಾ ಸಾರ್?
ಲವ್ವು ಫೇಯ್ಲ್ ಆಗಲ್ಲ. ಕೊಂಚ ಮರೆಯಲ್ಲಿದ್ದು ನಂತರ ಇನ್ನೊಂದೆಡೆಗೆ ಶಿಫ್ಟ್ ಆಗತ್ತೆ.

■ ರಾಮ್

ಪ್ರಶ್ನೆ ಕಳುಹಿಸಲು: editorsu@sudha.co.in